


ಎಡದಿಂದ ಬಲಕ್ಕೆ

1. ದೇವನೇ ಬಲ್ಲ, ಏಕೆ ಬಂತು ಇಂಥ ಕಾಡುಕಿಚ್ಚು! 4
3. ಅಸಾಧ್ಯವೇನಲ್ಲ ಯುದ್ಧ ನಿಲುಗಡೆಯ ಒಪ್ಪಂದ 3
4. ಕೆಲಸವನ್ನು ಆರಂಭಿಸುವ ಮುನ್ನ ಕಾಲುಗಳನ್ನು ತೊಳೆಯಬೇಕಲ್ಲ? 3
6. ಅಂದವಿರದ ಇಂಥ ಕೆಲಸಗಳಿಗೆ ಕಾರ್ಗತ್ತಲೇ ಸರಿ 4
7. ಪವಡಿಸಿ ಎದ್ದ ನಂತರ ಹೋದರೂ ಸಿಗಬಹುದೇ ರೇಶನ್ನು? 4
9. ಯಾತ್ರಿಕರನ್ನು ಭಿಕ್ಷೆಗಾಗಿ ಎಡೆಬಿಡದೆ ಪೀಡಿಸುವವ 4
12. ಗೌರವ ತರಬಲ್ಲದೇ ಅತ್ಯಂತ ದೊಡ್ಡ ಗ್ರಹದ ದಿನ? 4
14. ಕಂಡರಿಯದಷ್ಟು ದೈತ್ಯನಾಗಿತ್ತು ಆ ಕಂಬಳಿ ಹೊದ್ದ ಕಾಡು ಪ್ರಾಣಿ 3
15. ಕನ್ಯಾದಾನ ನಡೆದದ್ದು ಕಾಡಿನಲ್ಲಿ ಹೌದೇ? 3
16. ಗೋಡೆ ಏರಿ ನೋಡಿದರೆ ಕಂಡೀತು ಕಾಲಮಾಪಕ ಯಂತ್ರ 4

ಮೇಲಿಂದ ಕೆಳಕ್ಕೆ

1. ವೈರಿಗಳಾದರೂ ಕೇಳಿದ್ದನ್ನೆಲ್ಲ ಕೊಟ್ಟುಬಿಡುತ್ತಿದ್ದ ಕರ್ಣನ ಬಿರುದು? 4
2. ಅದೇ ಪಕ್ಕದಲ್ಲೇ ಇದ್ದಾನೆ ನೂರು ಸಾವಿರದ ಒಡೆಯ 4
3. ಬಂಧಿಸಲು ಬಂದವರ ಜೊತೆಗೆ ಅವನದೇನು ನೆಂಟಸ್ತನ? 3
5. ಸುತ್ತಲಿನವರ ಜೊತೆಗೂಡಿ ಹೀಗೂ ಉಂಟೇ ಸಂತಸದ ಕುಣಿತ? 3
6. ದಾನವರನ್ನೆಲ್ಲ ಅಂತ್ಯಗೊಳಿಸಿದ ದೇವ ಅಲ್ಲೇ ಕಣ್ಮರೆಯಾದನಲ್ಲ! 4
8. ಕರ್ತಾರನದೇ ಸೃಷ್ಟಿ ಈ ಸಾಗರ; ಅಮೂಲ್ಯ ಮಣಿಗಳ ಆಗರ 4
10. ಕಣ್ಣಿಗೂ ಕಾಣಲಿಲ್ಲ ದೃಶ್ಯ, ಅಷ್ಟು ಅತ್ಯಲ್ಪ ಕಾಲದ್ದು 3
11. ಕಾಡಿನ ರಕ್ಷಣೆಗೆ ಟೊಂಕ ಕಟ್ಟಿ ನಿಂತಿದ್ದು ನಮ್ಮ ಭಾಷೆಯವನೇ 4
12. ಗುರಾಣಿಯ ಬೆಲೆಯನ್ನು ಆರು ಪಟ್ಟು ಮಾಡಲು ತಕ್ಕ ಗಣಿತಕ್ರಿಯೆ 4
13. ಮೇವನ್ನು ಮಾರಲು ಬಂದವ ಎಂಥ ಕುಳ್ಳ ನೋಡಿ! 3

## 02–06–2022 ಉತ್ತರಗಳು

ಎಡದಿಂದ ಬಲಕ್ಕೆ

1. ಉಪದೇಶ 3. ವಿವಾದ 4. ಕಡಿಮೆ 6. ಆಪದ್ಧನ 8. ಮಾಗುವಿಕೆ 10. ಸುಮಧುರ 12. ಕಲೋದ್ಯಾನ 16. 'ಣರಕ' (ಕರಣ ಹಿಂದುಮುಂದು) 17. ಮಲಿನ 18. ರಮ್ಯವನ

ಮೇಲಿನಿಂದ ಕೆಳಕ್ಕೆ

1. ಉದರ 2. ಶಕಟ 3. ವಿರುದ್ಧ 5. ಮೆರುಗು 6. ಆಸುಪಾಸು 7. ನಷ್ಟಕರ 8. ಮಾನಸಿಕ 9. ಕೆಟ್ಟಜನ 11. ಧುರೀಣ 13. ಲೋಚನ 14. ಆಕರ 15. ಶಮನ

ಪ್ರಶ್ನಾಂಕಣ

# ಮ್ಯಾಮತ್ ಮತ್ತು ಮ್ಯಾಸ್ಟೋಡಾನ್

ಮ್ಯಾಮತ್ ಮತ್ತು ಮ್ಯಾಸ್ಟೋಡಾನ್ ಇವೆರಡೂ 'ಸೊಂಡಿಲಿನ ಪ್ರಾಣಿ' (ಪ್ರೊಬೋಸಿಡಿಯನ್) ಗಳ, ಎಂದರೆ ಈಗಿನ ಆನೆಗಳ ಕುಟುಂಬಕ್ಕೇ ಸೇರಿವೆ. ಹಲವಾರು ಉಪ ಪ್ರಭೇದಗಳನ್ನೂ ಹೊಂದಿದ್ದ ಈ ಎರಡೂ ಆನೆ ಪಿತಾಮಹ ಪ್ರಭೇದಗಳೂ ಪ್ರಸ್ತುತ ಸಂಪೂರ್ಣ ಅಳಿದುಹೋಗಿವೆ. ಇವುಗಳ ನಡುವಣ ಪ್ರಧಾನ ಅಂತರಗಳು ಹೀಗಿವೆ:

- ಮ್ಯಾಮತ್‌ಗಳು (ಚಿತ್ರ1 ರಲ್ಲಿನ ದೊಡ್ಡ ಗಾತ್ರದ ಪ್ರಭೇದ) ಈಗ್ಗೆ ಸುಮಾರು ಐದು ದಶಲಕ್ಷ ವರ್ಷ ಹಿಂದೆ ಆಫ್ರಿಕಾದಲ್ಲಿ ಅವತರಿಸಿ ಅಲ್ಲಿಂದ ಏಷ್ಯಾ, ಯೂರೋಪ್ ಮತ್ತು ಉತ್ತರ ಅಮೆರಿಕ ಖಂಡಗಳಿಗೆ ಹರಡಿದುವು. ಮ್ಯಾಮತ್‌ಗಳು ಪ್ರಧಾನವಾಗಿ ಈ ಮೂರೂ ಭೂ ಖಂಡಗಳ ಶೀತವಲಯದ ಹುಲ್ಲುಬಯಲುಗಳಲ್ಲಿ ನೆಲೆಸಿದ್ದುವು. ಮ್ಯಾಸ್ಟೋಡಾನ್‌ಗಳು ಈಗ್ಗೆ ಇಪ್ಪತ್ತೇಳು ದಶಲಕ್ಷ ವರ್ಷ ಹಿಂದೆ, ಎಂದರೆ ಮ್ಯಾಮತ್‌ಗಳಿಗಿಂತ ಬಹಳ ಹಿಂದೆಯೇ, ಅವತರಿಸಿ ಪ್ರಧಾನವಾಗಿ ಉತ್ತರ ಅಮೆರಿಕ ಮತ್ತು ಮಧ್ಯ ಅಮೆರಿಕದ ಅಡವಿ ಪ್ರದೇಶಗಳಲ್ಲಿ ವಾಸ್ತವ್ಯ ಹೊಂದಿದ್ದುವು.
- ಮ್ಯಾಮತ್ ಮತ್ತು ಮ್ಯಾಸ್ಟೋಡಾನ್ ಎರಡೂ ಈಗಿನ ಆನೆಗಳಂತೆಯೇ ಕಟ್ಟಾ ಸಸ್ಯಾಹಾರಿಗಳಾಗಿದ್ದುವು. ಮ್ಯಾಮತ್‌ಗಳದು ಹುಲ್ಲು ಮತ್ತು ಎಲೆಗಳನ್ನು ಮೇಯುವ ಆಹಾರ ಕ್ರಮವಾದರೆ ಮ್ಯಾಸ್ಟೋಡಾನ್‌ಗಳು ಗಿಡ ಮರಗಳ ಎಲೆಗಳನ್ನು ಮತ್ತು ಎಳೇ ರೆಂಬೆ ಕೊಂಬೆಗಳನ್ನು ತಿನ್ನುತ್ತಿದ್ದುವು. ಈ ವಿಭಿನ್ನ ಆಹಾರ ಕ್ರಮಗಳಿಗೆ ತಕ್ಕಂತೆ ಅವುಗಳ ಹಲ್ಲುಗಳ ರಚನೆಯಲ್ಲೂ ವ್ಯತ್ಯಾಸಗಳಿದ್ದುವು.
- ಮ್ಯಾಮತ್‌ಗಳದು ಉದ್ದುದ್ದ ಕಾಲುಗಳು; ಗರಿಷ್ಠ 13 ಅಡಿ ಮುಟ್ಟುವ ಉನ್ನತ ನಿಲುವು; 13 ಟನ್‌ವರೆಗಿನ ತೂಕ; 80 ವರ್ಷಗಳಷ್ಟು ಆಯುಷ್ಯ. ಮ್ಯಾಸ್ಟೋಡಾನ್‌ಗಳದು ಕುಳ್ಳ ಕಾಲುಗಳು; 9 ಅಡಿ ಮುಟ್ಟುವ ಎತ್ತರ; ಸರಾಸರಿ 10 ಟನ್ ತೂಕ. ಬಹುವಾಗಿ ಈಗಿನ 'ಆಫ್ರಿಕನ್ ಆನೆ' (ಚಿತ್ರ2) ಗಳನ್ನೇ ಹೋಲುವ ದಪ್ಪಪುಷ್ಟ ಶರೀರ; 60 ವರ್ಷ ಆಯುಷ್ಯ.




- ಮ್ಯಾಮತ್‌ಗಳದು ಗರಿಷ್ಠ 16 ಅಡಿ ಉದ್ದದ, ಮೇಲ್ಮುಖವಾಗಿ ಬಿಲ್ಲಿನಂತೆ ಬಾಗಿದ ಜೋಡಿ ದಂತ. ಮ್ಯಾಸ್ಟೋಡಾನ್‌ಗಳ ದಂತಗಳ ಉದ್ದ ಗರಿಷ್ಠ 8 ಅಡಿ (ಚಿತ್ರ1 ರಲ್ಲಿ ಗಮನಿಸಿ)

ಈಗ್ಗೆ ಹತ್ತಾರು ಸಾವಿರ ವರ್ಷ ಹಿಂದಿನ ಸುಮಾರಿಗೆ ಧರೆಯ ವಾಯುಗುಣದಲ್ಲಿ ಮೈದೋರಿದ ಬದಲಾವಣೆಗಳಿಗೆ ಈ ಆನೆ ಪ್ರಭೇದಗಳು ಹೊಂದಿಕೊಳ್ಳಲು ಸಾಧ್ಯವಾಗಲಿಲ್ಲ. ಅವುಗಳ ವಾಸಕ್ಷೇತ್ರಗಳಲ್ಲಿ ಸಂಭವಿಸಿದ ಶೀತದ ವೈಪರೀತ್ಯ ಮತ್ತು ಆಹಾರದ ಅಭಾವಗಳನ್ನು ಎದುರಿಸಲಾಗದೆ ಮ್ಯಾಮತ್ ಮತ್ತು ಮ್ಯಾಸ್ಟೋಡಾನ್‌ಗಳು ಸಂಪೂರ್ಣ ಅಳಿದುಹೋದುವು.

■ ಎನ್. ವಾಸುದೇವ್